**All India Radio: Bangalore**
**National Bulletin In Kannada**
**04.08.2025 1.10pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**04.08.2025 1.10pm**

**<><><><>**

ಮುಖ್ಯಾಂಶಗಳು

೧. ಲೋಕಸಭೆಯಲ್ಲಿ ಮುಂದುವರಿದ ವಿಪಕ್ಷಗಳ ಗದ್ದಲ ; ಕಲಾಪ ೨ ಗಂಟೆಗೆ ಮುಂದೂಡಿಕೆ

೨. ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೆನ್ ನಿಧನ ; ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಗಣ್ಯರಿಂದ ಸಂತಾಪ ; ರಾಜ್ಯಸಭೆಯಲ್ಲಿ ಗೌರವ ನಮನ

೩. ಭಾರತ ಮೌಲ್ಯಯುತ ಮಿತ್ರರಾಷ್ಟ್ರ ; ನಿರ್ಗಮನ ಹೇಳಿಕೆಯಲ್ಲಿ ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನೆಂಡ್ ಆರ್. ಮಾರ್ಕೋಸ್

೪. ಆಂಡರ್ಸನ್ ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿ ; ಕುತೂಹಲ ಕೆರಳಿಸಿರುವ ೫ನೇ ಪಂದ್ಯದ ಕೊನೆಯ ದಿನದಾಟ

><><><><><><><><><

ಲೋಕಸಭೆಯಲ್ಲಿಂದು ದಿನದ ಕಲಾಪ ಆರಂಭವಾಗುತ್ತಿದ್ದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಪ್ರತಿಪಕ್ಷಗಳು ಗದ್ದಲ ಮುಂದುವರಿಸಿದ ಹಿನ್ನೆಲೆಯಲ್ಲಿ ಕಲಾಪವನ್ನು ೨ ಗಂಟೆಯವರೆಗೆ ಮುಂದೂಡಲಾಗಿದೆ. ಇದಕ್ಕೂ ಮುನ್ನ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ, ಉದ್ಯೋಗ ಮೇಳದಡಿಯಲ್ಲಿ ಕಳೆದ ೧೮ ತಿಂಗಳಲ್ಲಿ ೧೧ ಲಕ್ಷ ಆಕಾಂಕ್ಷಿಗಳಿಗೆ ಉದ್ಯೋಗ ಲಭಿಸಿದೆ. ಆರ್‌ಬಿಐ ವರದಿ ಪ್ರಕಾರ, ಕಳೆದ ದಶಕದಲ್ಲಿ ೧೭ ಕೋಟಿಗೂ ಹೆಚ್ಚು ಯುವಕರಿಗೆ ಉದ್ಯೋಗ ಲಭಿಸಿದೆ. ಯುಪಿಎ ಆಡಳಿತದ ೧೦ ವರ್ಷಗಳಲ್ಲಿ ಕೇವಲ ಮೂರು ಕೋಟಿ ಉದ್ಯೋಗಾವಕಾಶಗಳನ್ನು ಸೃಜಿಸಲಾಗಿತ್ತು. ಮುಂದಿನ ೫ ವರ್ಷಗಳಲ್ಲಿ ೪ ಕೋಟಿಗೂ ಅಧಿಕ ಉದ್ಯೋಗಗಳನ್ನು ಸೃಜಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ವಿಕಸಿತ ಭಾರತ ರೋಜ್‌ಗಾರ್ ಯೋಜನೆಯಡಿ ೨ ಲಕ್ಷ ಕೋಟಿ ರೂಪಾಯಿ ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು. ಲೋಕಸಭೆಯಲ್ಲಿಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ರಾಷ್ಟ್ರೀಯ ಕ್ರೀಡಾಡಳಿತ ಮಸೂದೆ ೨೦೨೫ ಅನ್ನು ಮಂಡಿಸುವ

ನಿರೀಕ್ಷೆಯಿದೆ. ಈ ಮಸೂದೆ ದೇಶದಲ್ಲಿ ಕ್ರೀಡೆಗಳ ಅಭಿವೃದ್ಧಿ ಮತ್ತು ಪ್ರಚಾರ, ಕ್ರೀಡಾಪಟುಗಳ ಕಲ್ಯಾಣ, ಉತ್ತಮ ಆಡಳಿತ ಆಧಾರಿತ ನೈತಿಕ ಅಭ್ಯಾಸಗಳು, ಒಲಿಂಪಿಕ್ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ನೈತಿಕ ಮತ್ತು ನ್ಯಾಯಸಮ್ಮತ ನಡವಳಿಕೆ ಮತ್ತು ಕಾನೂನು ಮಾನದಂಡಗಳ ಅಳವಡಿಕೆಯ ಗುರಿ ಹೊಂದಿದೆ.

><><><><><><><><><><

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್ ಅವರ ತಂದೆ, ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಶಿಬು ಸೊರೆನ್ ಇಂದು ನವದೆಹಲಿಯಲ್ಲಿ ನಿಧನರಾದರು. ಅವರಿಗೆ ೮೧ ವರ್ಷ ವಯಸ್ಸಾಗಿತ್ತು. ಮೂತ್ರಪಿಂಡದ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಒಂದೂವರೆ ತಿಂಗಳ ಹಿಂದೆ ಪಾರ್ಶ್ವವಾಯುವಿಗೆ ಒಳಗಾಗಿದ್ದರು. ಶಿಬು ಸೊರೆನ್ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತಿತರ ಗಣ್ಯರು ದುಃಖ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಸಾಮಾಜಿಕ ನ್ಯಾಯಕ್ಕೆ ಹೆಸರುವಾಸಿಯಾಗಿದ್ದ ಅವರು, ಬುಡಕಟ್ಟು ಜನಾಂಗದ ಏಳಿಗೆಗೆ ಮತ್ತು ಜಾರ್ಖಂಡ್ ರಾಜ್ಯದ ಸ್ಥಾಪನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. ಜನರ ಕಲ್ಯಾಣದ ಕುರಿತು ವಿಶೇಷವಾಗಿ ಬುಡಕಟ್ಟು ಸಮುದಾಯದ ಬಗೆಗಿನ ಅವರ ಬದ್ಧತೆ ಸದಾ ಸ್ಮರಣೀಯ ಎಂದಿದ್ದಾರೆ. ಶಿಬು ಸೊರೆನ್ ಅವರನ್ನು ಸ್ಮರಿಸಿರುವ ಪ್ರಧಾನಿ ನರೇಂದ್ರ ಮೋದಿ, ಬುಡಕಟ್ಟು ಸಮುದಾಯಗಳು, ಬಡವರು ಮತ್ತು ದೀನದಲಿತರ ಸಬಲೀಕರಣದ ಬಗ್ಗೆ ಸೊರೆನ್ ವಿಶೇಷ ಉತ್ಸುಕತೆ ಹೊಂದಿದ್ದರು ಎಂದು ಹೇಳಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ಜಾರ್ಖಂಡ್ ಮಾಜಿ ಮುಖ್ಯಮಂತ್ರಿಯ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ದೇಶದ ಅತ್ಯಂತ ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದ ಶಿಬು ಸೊರೆನ್ ಸಮಾಜದ ದುರ್ಬಲ ವರ್ಗಗಳ, ವಿಶೇಷವಾಗಿ ಬುಡಕಟ್ಟು ಸಮುದಾಯದ ಹಕ್ಕುಗಳು ಮತ್ತು ಸಬಲೀಕರಣಕ್ಕಾಗಿ ತಮ್ಮ ಜೀವನದುದ್ದಕ್ಕೂ ಹೋರಾಡಿದ ಜಾರ್ಖಂಡ್‌ನ ಉನ್ನತ ನಾಯಕರಲ್ಲಿ ಒಬ್ಬರೆಂದು ಎಂದು ಅವರು ಹೇಳಿದರು.

><><><><><><><><><><

ಇಂದು ಬೆಳಗ್ಗೆ ನಿಧನರಾದ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೆನ್ ಅವರಿಗೆ ರಾಜ್ಯಸಭೆಯಲ್ಲಿ ಗೌರವ ನಮನ ಸಲ್ಲಿಸಲಾಯಿತು. ೧೧ ಗಂಟೆಗೆ ಕಲಾಪ ಆರಂಭವಾಗುತ್ತಿದ್ದಂತೆ ಉಪಸಭಾಪತಿ ಹರಿವಂಶ್, ಶಿಬು ಸೊರೆನ್ ಅವರ ನಿಧನ ವಾರ್ತೆಯನ್ನು ಸದನಕ್ಕೆ ತಿಳಿಸಿ ಅವರ

ಸಮಾಜಮುಖಿ ಪ್ರವೃತ್ತಿ, ಬುಡಕಟ್ಟು ಸಮುದಾಯ ಕುರಿತು ಕಾಳಜಿ ದೂರದರ್ಶಿ ಆಡಳಿತ, ಹಾಗೂ ಸಾಧನೆಗಳನ್ನು ಸ್ಮರಿಸಿದರು.

**ಧ್ವನಿ : ಉಪಸಭಾಪತಿ ಹರಿವಂಶ್ (೩೦ ಸೆಕೆಂಡ್‌ಗಳು)**

ಈ ವೇಳೆ ಸಭೆ ಮೌನಾಚರಣೆ ಮಾಡಿ ಶಿಬು ಸೊರೆನ್ ಅವರಿಗೆ ಗೌರವ ನಮನ ಸೂಚಿಸಿದ್ದು, ಬಳಿಕ ಉಪಸಭಾಪತಿಗಳು ಶಿಬು ಸೊರೆನ್ ಅವರ ಗೌರವಾರ್ಥ ಇಂದಿನ ರಾಜ್ಯಸಭಾ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

><><><><><><><><><

ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಆರ್. ಮಾರ್ಕೋಸ್ ಜೂನಿಯರ್ ಅವರು ಐದು ದಿನಗಳ ಭಾರತ ಭೇಟಿಗಾಗಿ ಇಂದು ಮಧ್ಯಾಹ್ನ ನವದೆಹಲಿಗೆ ಆಗಮಿಸಲಿದ್ದಾರೆ. ಅವರ ಜೊತೆ ಮೊದಲ ಮಹಿಳೆ ಲೂಯಿಸ್ ಅರೆನೆಟಾ, ಸಂಪುಟ ಸಚಿವರು, ಇತರೆ ಗಣ್ಯರು, ಹಿರಿಯ ಅಧಿಕಾರಿಗಳು ಹಾಗೂ ವ್ಯಾಪಾರ ವಲಯದ ಪ್ರತಿನಿಧಿಗಳನ್ನು ಒಳಗೊಂಡಿರುವ ಉನ್ನತ ಮಟ್ಟದ ನಿಯೋಗ ಸಹ ಆಗಮಿಸುತ್ತಿದೆ. ಭಾರತಕ್ಕೆ ಪ್ರಯಾಣ ಬೆಳೆಸಿರುವ ಅವರು, ತಮ್ಮ ನಿರ್ಗಮನ ಹೇಳಿಕೆಯಲ್ಲಿ ಭಾರತವನ್ನು ಮೌಲ್ಯಯುತ ಮಿತ್ರರಾಷ್ಟ್ರ ಎಂದು ಬಣ್ಣಿಸಿದ್ದಾರೆ. ಭಾರತ ಹಾಗೂ ಫಿಲಿಪೈನ್ಸ್ ರಾಷ್ಟ್ರಗಳ ಹಂಚಿಕೆಯ ಪ್ರಜಾಪ್ರಭುತ್ವ ಮೌಲ್ಯಗಳು, ಕಡಲ ಹಿತಾಸಕ್ತಿ ಮತ್ತು ಪ್ರಾದೇಶಿಕ ಶಾಂತಿ ಕುರಿತ ದೃಷ್ಟಿಕೋನ, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಆಳ ಮತ್ತು ಅರ್ಥಪೂರ್ಣವಾಗಿಸಿದೆ ಎಂದು ಹೇಳಿದ್ದಾರೆ. ಫಿಲಿಪೈನ್ಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಫರ್ಡಿನಾಂಡ್ ಆರ್. ಮಾರ್ಕೋಸ್ ಅವರ ಮೊದಲ ಭಾರತ ಭೇಟಿ ಇದಾಗಿದೆ. ಈ ಭೇಟಿಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಮಾರ್ಕೋಸ್ ನಡುವೆ ನಾಳೆ ದ್ವಿಪಕ್ಷೀಯ ಮಾತುಕತೆ ನಡೆಯಲಿದೆ. ಅಧ್ಯಕ್ಷ ಮಾರ್ಕೋಸ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಹ ಭೇಟಿಯಾಗಲಿದ್ದಾರೆ. ನಂತರ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರನ್ನೂ ಭೇಟಿ ಮಾಡುವ ಕಾರ್ಯಕ್ರಮವಿದೆ. ನವದೆಹಲಿಯ ಭೇಟಿಯ ನಂತರ ಮಾರ್ಕೋಸ್ ಅವರು ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ.

><><><><><><><><><

ಭಾರತ ಮತ್ತು ಅಮೆರಿಕ ನಡುವಿನ ಸುಂಕ ಸಂಬಂಧಿತ ಬೆಳವಣಿಗೆಗಳ ಕುರಿತು ಸುಳ್ಳು ಹೇಳಿಕೆಗಳನ್ನು ಹರಡುತ್ತಿರುವ ಸಾಮಾಜಿಕ ಮಾಧ್ಯಮ ಖಾತೆಗಳಿಂದ ಕೇಂದ್ರ ವಾರ್ತಾ ಶಾಖೆಯ ಸತ್ಯ ಶೋಧನಾ ಘಟಕ ವಿವರಣೆ ಕೇಳಿದೆ. ಈ ಖಾತೆಗಳು ವಿದೇಶಾಂಗ ಸಚಿವಾಲಯ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಎಂದು ಬಿಂಬಿಸುವ ಸುಳ್ಳು ಹೇಳಿಕೆಗಳನ್ನು ಹರಡುತ್ತಿದ್ದವು ಎಂಬ ಆರೋಪವಿದೆ. ಆನ್‌ಲೈನ್‌ನಲ್ಲಿ ಪ್ರಸಾರವಾಗುತ್ತಿರುವ ತಪ್ಪು ಮಾಹಿತಿ ಮತ್ತು ನಕಲಿ ಪ್ರಚಾರಕ್ಕೆ ಬಲಿಯಾಗದಂತೆ ಸತ್ಯಶೋಧನಾ ಘಟಕ ಬಳಕೆದಾರರಿಗೆ ಎಚ್ಚರಿಕೆ ನೀಡಿದೆ. ಅಂತಹ ಯಾವುದೇ ವಿಷಯವನ್ನು ಹಂಚಿಕೊಳ್ಳುವ ಅಥವಾ ನಂಬುವ ಮೊದಲು, ಅಧಿಕೃತ ಮೂಲಗಳೊಂದಿಗೆ ಪರಿಶೀಲಿಸುವಂತೆಯೂ ಜನರಿಗೆ ಸಲಹೆ ನೀಡಿದೆ.

><><><><><><><><><

ಭಾರತೀಯ ಸೇನೆಯನ್ನು ಅವಮಾನಿಸಿ ನೀಡಿದ ಹೇಳಿಕೆ ಕುರಿತಂತೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಸರ್ವೋಚ್ಚ ನ್ಯಾಯಾಲಯ ಇಂದು ತರಾಟೆಗೆ ತೆಗೆದುಕೊಂಡಿದೆ. ಭಾರತ್ ಜೋಡೋ ಯಾತ್ರೆಯ ಸಂದರ್ಭದಲ್ಲಿ, ಚೀನಾ ಯೋಧರು ಅರುಣಾಚಲ ಪ್ರದೇಶದಲ್ಲಿ ಭಾರತೀಯ ಯೋಧರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ ಎಂದು ರಾಹುಲ್ ಹೇಳಿಕೆ ನೀಡಿದ್ದರು. ರಾಹುಲ್ ಗಾಂಧಿ ನಿಜವಾದ ಭಾರತೀಯರಾಗಿದ್ದರೆ, ಅವರು ಇದನ್ನೆಲ್ಲ ಹೇಳುತ್ತಿರಲಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

><><><><><><><><><

ಇರಾನ್ ಅಧ್ಯಕ್ಷ ಮಸೌದ್ ಫೆಜೆಷ್ಕಿಯಾನ್ ಅವರ ನೇತೃತ್ವದಲ್ಲಿ ಹೊಸ ರಕ್ಷಣಾ ಮಂಡಳಿಯ ರಚನೆಗೆ ಇರಾನ್‌ನ ಸರ್ವೋಚ್ಚ ರಾಷ್ಟ್ರೀಯ ಭದ್ರತಾ ಮಂಡಳಿ ಅನುಮೋದನೆ ನೀಡಿದೆ.

><><><><><><><><><

ಯೆಮೆನ್‌ನ ದಕ್ಷಿಣ ಕರಾವಳಿಯಲ್ಲಿ ಭಾನುವಾರ ಹಡಗು ಮುಳುಗಿ ಕನಿಷ್ಠ ೬೮ ಇಥಿಯೋಪಿಯನ್ ವಲಸಿಗರು ಸಾವನ್ನಪ್ಪಿದ್ದಾರೆ ಮತ್ತು ೭೪ ಜನರು ಕಾಣೆಯಾಗಿದ್ದಾರೆ ಎಂದು ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ವಲಸೆ ಸಂಸ್ಥೆ - ಐಒಎಂ ತಿಳಿಸಿದೆ. ೧೫೪ ಜನರನ್ನು ಹೊತ್ತೊಯ್ಯುತ್ತಿದ್ದ ದೋಣಿ, ಅಬ್ಯಾನ್ ಗವರ್ನರೇಟ್ ಬಳಿ ಮಗುಚಿ, ಮೃತದೇಹಗಳು ದಡ ಸೇರಿವೆ. ಕೇವಲ ೧೨ ಜನರು ಮಾತ್ರ ಬದುಕುಳಿದಿದ್ದಾರೆ. ನಡೆಯುತ್ತಿರುವ ಸಂಘರ್ಷದ ಹೊರತಾಗಿಯೂ, ಸೌದಿ ಅರೇಬಿಯಾಕ್ಕೆ ಹೋಗುವ ವಲಸಿಗರಿಗೆ ಯೆಮೆನ್ ಪ್ರಮುಖ ಸಾರಿಗೆ ಮಾರ್ಗವಾಗಿದೆ.

ಇಥಿಯೋಪಿಯನ್ ವಲಸಿಗರು ಯುದ್ಧ ಮಾಡುವ ಬಣಗಳಿಂದ ಹಿಂಸಾಚಾರ ಸೇರಿದಂತೆ ತೀವ್ರ ಅಪಾಯಗಳನ್ನು ಎದುರಿಸುತ್ತಾರೆ.

><><><><><><><><><><

ಲಂಡನ್ ನ ಓವೆಲ್‌ನಲ್ಲಿ ನಡೆಯುತ್ತಿರುವ ಆಂಡರ್ಸನ್ ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ೫ನೇ ಹಾಗೂ ಕೊನೆಯ ಪಂದ್ಯದ ಕೊನೆಯ ದಿನದಾಟದಲ್ಲಿಂದು ಇಂಗ್ಲೆಂಡ್ ತನ್ನ ೨ನೇ ಇನ್ನಿಂಗ್ಸ್ ಅನ್ನು ಮುಂದುವರಿಸಲಿದೆ. ನಾಲ್ಕನೇ ದಿನದಾಟದ ಅಂತ್ಯಕ್ಕೆ ನಿನ್ನೆ ಭಾರತ ನೀಡಿದ ೩೭೪ ರನ್‌ಗಳ ಗುರಿಯನ್ನು ಬೆನ್ನತ್ತಿದ ಇಂಗ್ಲೆಂಡ್ ೬ ವಿಕೆಟ್ ನಷ್ಟಕ್ಕೆ ೩೩೯ ರನ್ ಗಳಿಸಿದೆ. ಸರಣಿ ಸಮಬಲ ಸಾಧಿಸಲು ಭಾರತಕ್ಕೆ ಈ ಪಂದ್ಯದ ಗೆಲುವು ಪ್ರಮುಖವಾಗಿದ್ದು, ಜಯ ಸಾಧಿಸಲು ಇನ್ನು ೪ ವಿಕೆಟ್ ಕಬಳಿಸುವ ಅಗತ್ಯವಿದೆ. ಇನ್ನು ಸರಣಿಯಲ್ಲಿ ೨ ಪಂದ್ಯಗಳನ್ನು ಗೆದ್ದು ಮುನ್ನಡೆಯಲ್ಲಿರುವ ಇಂಗ್ಲೆಂಡ್‌ಗೆ ಸರಣಿ ಕೈವಶ ಮಾಡಿಕೊಳ್ಳಲು ೩೫ ರನ್‌ಗಳ ಅಗತ್ಯವಿದೆ. ಇಂದಿನ ದಿನದಾಟ ಅಪರಾಹ್ನ ೩.೩೦ಕ್ಕೆ ಆರಂಭವಾಗಲಿದ್ದು ತೀವ್ರ ಕುತೂಹಲ ಕೆರಳಿಸಿದೆ.

><><><><><><><><><><